# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

## ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯಲಹಂಕ ಉಪನಗರ ಉಪ ವಿಭಾಗ

## ವಾರ್ಡ್ ನಂ.04ರ (ಯಲಹಂಕ ಉಪನಗರ) ವಾರ್ಡ್ ಕಮಿಟಿ ಸಭೆಯ ನಡವಳಿಗಳು.

ದಿನಾಂಕ: 20-03-2021 ರಂದು ಸಂಜೆ 4.00 ಗಂಟೆಗೆ ವಾರ್ಡ್ ನಂ-04 ಯಲಹಂಕ ಉಪನಗರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ಉಪನಗರ ಉಪ ವಿಭಾಗದ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಮನೋಜ್ ಜೈನ್, ಐ.ಎ.ಎಸ್ | ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-04) |
| 02 | ಶ್ರೀ.ರಾಜೇಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ವಿದ್ಯುತ್) |
| 03 | ಶ್ರೀ.ಹೆಚ್.ಪಿ.ಸಚಿನ್ | ಸ.ಕಾ.ಅ, ಬಿ.ಬಿ.ಎಂ.ಪಿ (ಯ.ಉ.ಉ.ವಿ) |
| 04 | ಶ್ರೀಮತಿ. ಕೃತಿಕಾ | ಸಹಾಯಕ ಕಂದಾಯ ಅಧಿಕಾರಿಗಳು (ಯ.ಉ.ಉ.ವಿ) |
| 05 | ಶ್ರೀ.ಗಿರೀಶ್ ಕುಮಾರ್ | ಸಹಾಯಕ ಅಭಿಯಂತರರು (ಕೆರೆಗಳು) ಗೈರು ಹಾಜರು |
| 06 | ಶ್ರೀ.ಚಂದ್ರಶೇಖರ್ ಬಿ | ಸ.ಕಾ.ಅ ಬಿ.ಬಿ.ಎಂ.ಪಿ (ರಾಜಕಾಲುವೆ) |
| 07 | ಶ್ರೀ.ಪ್ರಭುದ್ದ ಕಾಂಬ್ಳೆ | ಸ.ಕಾ.ಅ ಬಿ.ಬಿ.ಎಂ.ಪಿ (ಎಸ್.ಡಬ್ಲ್ಯೂ.ಎಂ) ಗೈರು ಹಾಜರು |
| 08 | ಶ್ರೀ.ಹನುಮಂತಪ್ಪ | ವಲಯ ಅರಣ್ಯಾಧಿಕಾರಿಗಳು |
| 09 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಪರಿವೀಕ್ಷಕರು (ತೋಟಗಾರಿಕೆ) |
| 10 | ಶ್ರೀ.ರಾಮಸಂಜೀವಯ್ಯ | ಸ.ಅ ವಾರ್ಡ್ ನಂ-04 ಹಾಗೂ ಕಾರ್ಯದರ್ಶಿಗಳು. |
| 11 | ಶ್ರೀ.ವಿನಾಯಕ ಕೆ.ಎಂ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 12 | ಶ್ರೀ.ಕೆ.ಎಂ.ಸತೀಶ್ ಬಾಬು | ಕಿ.ಅ (ಬೇಸ್ಕಾಂ) |
| 13 | ಠಾಣಾಧಿಕಾರಿಗಳು | ಯಲಹಂಕ ಉಪನಗರ ಪೋಲಿಸ್ ಠಾಣೆ ಗೈರು ಹಾಜರು |
| 14 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ವಾರ್ಡ್ -4 (ಗೈರು ಹಾಜರು) |
| 15 | ಶ್ರೀಮತಿ. ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 16 | ಶ್ರೀ.ಶೇಖರ್ | ಅರಣ್ಯ ಬಿ.ಬಿ.ಎಂ.ಪಿ ಯಲಹಂಕ ವಲಯ |

| | | |
|---|---|---|
| 17 | ಶ್ರೀಮತಿ. ಕೆ.ಎಸ್ ಗೀತಾ | ಜಾನುವಾರು ಅಧಿಕಾರಿ ಬಿ.ಬಿ.ಎಂ.ಪಿ ಯಲಹಂಕ ವಲಯ |
| 18 | ಶ್ರೀಮತಿ. ವರುಣ್ ಕುಮಾರ್ | ಸ.ಅ (ರಸ್ತೆ ಮೂಲಭೂತ ಸೌಕರ್ಯ) ಬಿ.ಬಿ.ಎಂ.ಪಿ (ಗೈರು ಹಾಜರು) |
| 19 | ಶ್ರೀಮತಿ. ಪಾವನಾ ನಾಗತಿ | ಸ.ಅ (ಯೋಜನೆ) ಬಿ.ಬಿ.ಎಂ.ಪಿ |
| 20 | ಕಿರಣ್ ಬಿ | ಸ.ಕಾ.ಅ (ಯೋಜನೆ) ಬಿ.ಬಿ.ಎಂ.ಪಿ |
| 21 | ಶ್ರೀಮತಿ. ಅನುಸೂಯ ಡಿ | ಸ.ಕಾ.ಅ (ಒಳಚರಂಡಿ) ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 22 | ಡಾಕ್ಟರ್ ಯೋಗನಂದ | ಆರೋಗ್ಯ ವೈದ್ಯಾಧಿಕಾರಿಗಳು (ಗೈರು ಹಾಜರು) |
| 23 | ಠಾಣಾಧಿಕಾರಿಗಳು (ಕೃಷ್ಣಪ್ಪ) | ಎ.ಎಸ್.ಐ ಟ್ರಾಫಿಕ್ ಪೋಲಿಸ್ |
| 24 | ಎ.ಮಧುಸೂಧನ್ | ವಿದ್ಯುತ್ ಗುತ್ತಿಗೆದಾರರು, ಗೈರು ಹಾಜರು |
| 25 | ನಾರಾಯಣಸ್ವಾಮಿ | ಐ.ಟಿ.ಸಿ. (ಒಳತ್ಯಾಜ್ಯ) |
| | **ಬಡಾವಣೆ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/.** | |
| 01 | ಶ್ರೀ.ಸತೀಶ್ ಎಂ | ಮಾಜಿ ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್ 4 |
| 02 | ಪದ್ಮಾ ಪಾಟಿಲ್ | ಆರ್,ಡಬ್ಲ್ಯೂ.ಎ ಪೂರ್ವಾಂಕರ |
| 03 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 04 | ಶ್ರೀಮತಿ. ಬೇಬಿರಾಣಿ | ಆರ್,ಡಬ್ಲ್ಯೂ.ಎ |
| 05 | ಬಬಿತ ಪೈ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 06 | ಆರ್.ಡಿ.ಪುಟ್ಟಸ್ವಾಮಿ | ಆರ್.ಡಬ್ಲ್ಯೂ.ಎ |
| 07 | ಬೋರೆಗೌಡ | ಆರ್.ಡಬ್ಲ್ಯೂ.ಎ |
| 08 | ಮಣಿ | ಆರ್.ಡಬ್ಲ್ಯೂ.ಎ ಎಲ್.ಬಿ.ಎಸ್ ನಗರ |

ಶ್ರೀ. ಸಚಿನ್ ಹೆಚ್.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ. ಮನೋಜ್ ಜೈನ್ ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು ಬಿ.ಬಿ.ಎಂ.ಪಿ (ಯೋಜನೆ) ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಬೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 06-03-2021 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-04ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ವಾರ್ಡ್ ನಂ 4ರ ಪ್ರದೇಶಗಳಲ್ಲಿ ಮರಗಳಿಂದ ಉದುರುವ ಎಲೆಗಳು ಹಾಗೂ ಇತರೆ ರೆಂಬೆ ಕೊಂಬೆಗಳನ್ನು ಪುಡಿ ಮಾಡಲು ಮತ್ತು ಕತ್ತರಿಸಲು ಪ್ರತ್ಯೇಕವಾದ | ಸಂಬಂದಿಸಿದ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಭೆಯಲ್ಲಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಬಿ.ಎಂ.ಪಿ |

| | | | |
|---|---|---|---|
| | 2 ಸಂಖ್ಯೆ ಲೀವ್ ಶ್ರೇಡ್ಡರ್ ಮತ್ತು ಹೈ ಪವರ್ ಟ್ವಿಗ್ಸ್ ಶ್ರೇಡ್ಡರ್ ಮಿಷನ್‌ಗಳನ್ನು ವಾರ್ಡ್‌ಗಳಲ್ಲಿ ಆಳವಡಿಸಿಕೊಳ್ಳಬೇಕೆಂದು ಶ್ರೀಮತಿ. ಪದ್ಮಾ ಪಾಟಿಲ್ ಆರ್.ಡಬ್ಲ್ಯೂ.ಎ ರವರು ಕೋರಿದರು. | ತೀರ್ಮಾನಿಸಲಾಯಿತು. | ಎಸ್.ಡಬ್ಲ್ಯೂ.ಎಂ) |
| 02 | ಎ ಸೇಕ್ಟರ್ 15ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ನಿರ್ಮಿಸಿರುವ ಆರ್.ಸಿ.ಸಿ. ಚರಂಡಿಯಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮ ವಹಿಸಲು ಸ್ಥಳೀಯ ಆರ್.ಡಬ್ಲ್ಯೂ.ಎ ರವರು ಕೋರಿದರು. | ಗ್ರೇಡಿಯಂಟ್‌ಅನ್ನು ಪರಿಶೀಲಿಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲು ಸಂಬಂದಿಸಿದ ಅದಿಕಾರಿಗಳಿಗೆ ಸೂಚಿಸಿ ಸಭೆಯಲ್ಲಿ ತೀರ್ಮಾನಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು (ಬಿ.ಬಿ.ಎಂ.ಪಿ ಯಲಹಂಕ ಉಪನಗರ ಉಪ ವಿಭಾಗ) |
| 03 | ಶೇಷಾದ್ರಿಪುರಂ ಕಾಲೇಜಿನಿಂದ ಚಿಕ್ಕಬೊಮ್ಮಸಂದ್ರ ವೃತ್ತದವರೆಗೆ ವೈಟ್ ಟ್ಯಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ಇದ್ದು ಸದರಿ ಗುಂಡಿಗಳನ್ನು ಮುಚ್ಚಿ ಬ್ಯಾರಿಕೇಡಿಂಗ್ ಆಳವಡಿಸುವಂತೆ ಆರ್.ಡಬ್ಲ್ಯೂ.ಎ ರವರು ಕೋರಿದರು. | ಕಾಮಗಾರಿ ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ಬ್ಯಾರಿಕೇಡಿಂಗ್ ಆಳವಡಿಸಬೇಕೆಂದು ಹಾಗೂ ಸಾರ್ವಜನಿಕರಿಗೆ ಕಾಮಗಾರಿಯ ನಡೆಯುವುದರ ಬಗ್ಗೆ ಎಚ್ಚರಿಕೆ ಫಲಕಗಳನ್ನು ಆಳವಡಿಸಲು, ಹಾಗೂ ಸುರಕ್ಷಿತ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಸಭೆಯಲ್ಲಿ ತೀರ್ಮಾನಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) (ಬಿ.ಬಿ.ಎಂ.ಪಿ ಯಲಹಂಕ ವಲಯ) |
| 04 | ಶೇಷಾದ್ರಿಪುರಂ ಕಾಲೇಜಿನಿಂದ ಚಿಕ್ಕಬೊಮ್ಮಸಂದ್ರ ವೃತ್ತದವರೆಗೆ ಇರುವ ಬೃಹತ್ ಗಾತ್ರದ ಮರಗಳನ್ನು ಪರಿಶೀಲಿಸಿ ಸ್ಥಳ ಪರಿವೀಕ್ಷಣೆ ಮಾಡಿ ರಸ್ತೆಗೆ ಭಾಗಿರುವ ರೆಂಬೆ ಕೊಂಬೆಗಳನ್ನು ಕಟಾವು ಮಾಡಲು ಆರ್.ಡಬ್ಲ್ಯೂ.ಎ ರವರು ಸಭೆಯಲ್ಲಿ ಕೋರಿದರು. | ಬೃಹತ್ ಗಾತ್ರದ ಮರಗಳನ್ನು ಪರಿಶೀಲಿಸಿ ಮತ್ತು ಸ್ಥಳ ಪರಿವೀಕ್ಷಣೆ ಮಾಡಿ ರಸ್ತೆಗೆ ಭಾಗಿರುವ ರೆಂಬೆ ಕೊಂಬೆಗಳನ್ನು ಕಟಾವು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಸಭೆಯಲ್ಲಿ ತೀರ್ಮಾನಿಸಲಾಯಿತು. | ವಲಯ ಅರಣ್ಯಾದಿಕಾರಿಗಳು ಯಲಹಂಕ ವಲಯ |
| 05 | ವಾರ್ಡ್ ನಂ 4ರ ಪ್ರದೇಶಗಳಲ್ಲಿರುವ ಅಂಗಡಿ ಮಳಿಗೆಗಳಲ್ಲಿ ಪ್ಲಾಸ್ಟೀಕ್ ಅನ್ನು ಸೀಸ್ ಮಾಡಲು ವಾರಕ್ಕೊಮ್ಮೆ ಸಂಬಂದಿಸಿದ ಅಧಿಕಾರಿಗಳ ಜೊತೆ ಜಂಟಿ ತಪಾಸಣೆ ಮಾಡಿ ಪ್ಲಾಸ್ಟಿಕ್ ಸೀಸ್ ಮಾಡುವಂತೆ ಹಾಗೂ ಅಂಗಡಿ ಮಾಲೀಕರಿಗೆ ದಂಡ ವಿಧಿಸುವಂತೆ ಶ್ರೀಮತಿ. ಪದ್ಮಾ ಪಾಟಿಲ್ ಆರ್.ಡಬ್ಲ್ಯೂ.ಎ ರವರು ಕೋರಿದರು. | ಜಂಟಿ ತಪಾಸಣೆ ಮಾಡಿ ಪ್ಲಾಸ್ಟಿಕ್ ಸೀಸ್ ಮಾಡಲು ಹಾಗೂ ಅಂಗಡಿ ಮಾಲೀಕರಿಗೆ ದಂಡ ವಿಧಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಸಭೆಯಲ್ಲಿ ತೀರ್ಮಾನಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಬಿ.ಎಂ.ಪಿ ಎಸ್.ಡಬ್ಲ್ಯೂ.ಎಂ) & ಹಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ) |

| | | | |
|---|---|---|---|
| 06 | ಶಾರದ ನಗರದಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಸುತ್ತಿರುವುದಿಲ್ಲವೆಂದು ಸ್ಥಳೀಯರಾದ ಶ್ರೀ.ಬೋರೆಗೌಡ ಆರ್.ಡಬ್ಲ್ಯೂ.ಎ ರವರು ಸಭೆಯಲ್ಲಿ ಕೋರಿದರು. | ಸದರಿ ಪ್ರದೇಶವನ್ನು ತಪಾಸಣೆ ಮಾಡಿ ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಸುವಂತೆ ಸಂಬಂದಿಸಿದ ಅಧಿಕಾರಿಗಳಿಗೆ ಸೂಚಿಸಿ ಸಭೆಯಲ್ಲಿ ತಿರ್ಮಾನಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |

- ವಾರ್ಡ್ ನಂ–04ರ ಪ್ರದೇಶಗಳ ರಸ್ತೆಗಳಲ್ಲಿ ಪರಿವೀಕ್ಷಣೆ ಮಾಡಿ ಸುಮಾರು 30 ಅಡಿಗಿಂತ ಎತ್ತರವಿರುವ ಬಾಗಿರುವ ಮರಗಳ ಕೊಂಬೆಗಳನ್ನು ಕಟಾವು ಮಾಡುವಂತೆ ಕ್ರಮ ಕೈಗೊಳ್ಳಲು ವಲಯ ಅರಣ್ಯಾದಿಕಾರಿಗಳಿಗೆ ನೊಡೆಲ್ ಅಧಿಕಾರಿಗಳು ಸೂಚಿಸಿದರು.
- 10ನೇ ಬಿ ಮುಖ್ಯರಸ್ತೆ ಮನೆ ನಂ 1945 ಮೇಲ್ಛಾವಣಿಯಲ್ಲಿ ಅಳವಡಿಸಿರುವ ಟವರ್‌ಅನ್ನು 7 ದಿನಗಳ ಒಳಗಾಗಿ ತೆರವುಗೊಳಿಸುವಂತೆ ಕಟ್ಟಡದ ಮಾಲೀಕರಿಗೆ ಸೂಚಿಸಿದರು. ತಪ್ಪಿದ್ದಲ್ಲಿ ಬೇಸ್ಕಾಂ ವಾಟರ್ ಸಪ್ಲೈ ಯು.ಜಿ.ಡಿ ಸಂಪರ್ಕವನ್ನು ಸ್ಥಗೀತಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನೊಡೆಲ್ ಅಧಿಕಾರಿಗಳು ಸೂಚಿಸಿದರು.
- ವಾರ್ಡ್ ನಂ–04ರ ಪ್ರದೇಶಗಳಲ್ಲಿನ ಅಪಾರ್ಟ್‌ಮೆಂಟ್‌ಗಳಲ್ಲಿ ಕೊವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ನಂ–04ರ ಪ್ರದೇಶಗಳಲ್ಲಿರುವ ರಸ್ತೆಗಳಲ್ಲಿ ಬೀದಿ ದೀಪಗಳು ಉರಿಯುವಂತೆ ಹಾಗೂ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಸಂಬಂದಿಸಿದ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಬಿ.ಬಿ.ಎಂ.ಪಿ ರವರಿಗೆ ಸೂಚಿಸಿದರು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeevaiah

ಶ್ರೀ.ರಾಮಸಂಜೀವಯ್ಯ
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ–04

ಶ್ರೀ.ಮನೋಜ್ ಜೈನ್, ಐ.ಎ.ಎಸ್.
ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ–04

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.